ದಿನಾಂಕಃ 03.08.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 6ನೇ ಪ್ರತಿವಾದಿ ಪರ ಶ್ರೀ. ಎಂ.ಕೆ.ಡಿ. ವಕೀಲರಿಂದ:**

ನಾನು 6ನೇ ಪ್ರತಿವಾದಿ ಪಂಚಾಯಿತಿಯ ವ್ಯಾಪ್ತಿಯಲ್ಲಿ ವಾಸಿಸುತ್ತಿದ್ದೇನೆ ಎಂದರ ಸರಿ. ಏನಾದರು ಕೆಲಸವಿದ್ದರೆ ನಾನು 6ನೇ ಪ್ರತಿವಾದಿ ಕಛೇರಿಗೆ ಹೋಗುತ್ತೇನೆ ಎಂದರೆ ಸರಿ. ನನಗೆ ಸೇರಿದ ದಾವಾ ಸ್ವತ್ತು ಸರ್ವೆ ನಂ.69ರ ಸರ್ಕಾರಿ ಜಮೀನಿನ ಪಕ್ಕದಲ್ಲಿದೆ ಎಂದರೆ ಸರಿ. ಕೆ ಕೆ ಜಾರ್ಜ್ ಎನ್ನುವವರು ದಾವಾ ಸ್ವತ್ತಿನ ಮೂಲ ಮಾಲೀಕರಾಗಿದ್ದರು. ದಾವಾ ಸ್ವತ್ತು ಸರ್ಕಾರಿ ಜಮೀನು ಆಗಿರಲಿಲ್ಲ. ಸರ್ವೆ ನಂ.69 ಸರ್ಕಾರಿ ಕೆರೆ ಎಂದರೆ ಸರಿ. ಸದರಿ ಕೆರೆಯ ನೀರನ್ನು 6ನೇ ಪ್ರತಿವಾದಿಯವರು ಗ್ರಾಮಸ್ಧರಿಗೆ ಸರಬರಾಜು ವಾಡುತ್ತಿದ್ದಾರೆ ಎಂದರೆ ಸರಿ. ಸರ್ವೆ ನಂ.69ರಲ್ಲಿ ಒಟ್ಟು 4 ಎಕರೆ 73 ಸೆಂಟ್ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 02.08.2008 ರಂದು 6ನೇ ಪ್ರತಿವಾದಿ ವ್ಯಾಪ್ತಿಯಲ್ಲಿ ಆದ ಗ್ರಾಮ ಸಭೆಯಲ್ಲಿ ನಾನು ಸರ್ವೆ ನಂ. 69 ರ 1 ಎಕರೆ 30 ಸೆಂಟ್ ಜಮೀನನ್ನು ಒತ್ತುವರಿ ಮಾಡಿದ್ದೇನೆಂದು ಗ್ರಾಮಸ್ಥರು ದೂರು ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ದಿನ 6ನೇ ಪ್ರತಿವಾದಿಯು ನಡವಳಿಯಂತೆ ಸದರಿ ಜಮೀನಿನ ಸರ್ವೆ ಮಾಡಿಸಲು ತಹಶೀಲ್ದಾರ್ ರವರಿಗೆ ಅರ್ಜಿ ಕೊಡಲು ನಿರ್ಣಯಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

ದಿನಾಂಕ 28.09.2008 ರಂದು 6ನೇ ಪ್ರತಿವಾದಿಯು ಒತ್ತುವರಿ ತೆರವುಗೊಳಿಸಿಕೊಡುವಂತೆ ತಹಶೀಲ್ದಾರ್ ರವರಿಗೆ ಪತ್ರ ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪತ್ರದಂತೆ ದಿನಾಂಕ 22.09.2022 ರಂದು ಸರ್ವೆ ನಡೆದು ನನ್ನ ಜಮೀನು ಹಾಗೂ ಸರ್ಕಾರಿ ಜಮೀನಿನ ಚೆಕ್ ಬಂಧಿ ಗುರುತಿಸಿ, ಬೇಲಿ ಹಾಕಿ, ಒತ್ತುವರಿ ತೆರವು ಗೊಳಿಸಿದ್ದಾರೆ ಎಂದರೆ ಸಾಕ್ಷಿಯು ಸರ್ವೆಯಾಗಿ ಚೆಕ್ ಬಂಧಿ ಗುರುತಿಸಿದ್ದಾರೆ ಆದರೆ ನಾನು ಯಾವುದೇ ಜಮೀನು ಒತ್ತುವರಿ ಮಾಡಿಲ್ಲ ಎಂದು ನುಡಿಯುತ್ತಾರೆ. ಈಗ ನೋಡುತ್ತಿರುವ ದಾಖಲೆಗಳು ಸದರಿ ಸರ್ವೆಗೆ ಸಂಬಂಧಪಟ್ಟಂತ ಪತ್ರ, ಮಹಜರ ಮತ್ತು ಫೋಟೋ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಸರ್ಕಾರಿ ಜಮೀನು ಒತ್ತುವರಿ ಮಾಡಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಒಪ್ಪಿಕೊಂಡ ದಾಖಲೆಗಳನ್ನು ನಿಡಿ1 ರಿಂದ 4 ಎಂದು ಗುರುತಿಸಲಾಯಿತು.

ಮೇಲೆ ಹೇಳಿದ ಸರ್ವೆಯಾದ ನಂತರ ದಾವಾ ಜಮೀನು ಮತ್ತು ಸರ್ಕಾರಿ ಜಮೀನಿನ ನಡುವೆ 6ನೇ ಪ್ರತಿವಾದಿಯುು ಬೇಲಿ ಹಾಕಿದ್ದಾರೆ ಎಂದರೆ ಸರಿ. ಸದರಿ ಸರ್ವೆಗೆ ನನ್ನದು ಏನು ತಕರಾರು ಇಲ್ಲ ಎಂದರೆ ಸರಿ. 6ನೇ ಪ್ರತಿವಾದಿ ದಾವಾ ಜಮೀನನ್ನು ಒತ್ತುವರಿ ಮಾಡಿಲ್ಲ ಎಂದರೆ ಸರಿ. ಈ ನೋಡುತ್ತಿರುವ ಫೋಟೋಗಳಲ್ಲಿ ಕಾಣುವ ಬೇಲಿ ಮೇಲಿ ಹೇಳಿದಂತೆ 6ನೇ ಪ್ರತಿವಾದಿಯವರು ದಾವ ಜಮೀನು ಹಾಗೂ ಸರ್ಕಾರಿ ಜಮೀನಿನ ನಡುವೆ ಹಾಕಿದ್ದಾರೆ ಎಂದರೆ ಸರಿ. ಸದರಿ ಫೋಟೋಗಳನ್ನು ನಿಡಿ5 ರಿಂದ 7 ಎಂದು ಗುರುತಿಸಲಾಯಿತು. ನಾನು 6ನೇ ಪ್ರತಿವಾದಿ ವಿರುದ್ಧ ವಾದ ಪತ್ರದಲ್ಲಿ ಹೇಳಿರುವ ಆರೋಪಣೆಗಳು ಸುಳ್ಳು ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಕೇಳಿರುವ ಪರಿಹಾರಕ್ಕೆ ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು: 1 ರಿಂದ 5ನೇ ಪ್ರತಿವಾದಿ ಪರ ಪ್ರಾಜ್ಞಾ ಸಹಾಯಕ ಸರ್ಕಾರಿ ವಕೀಲರು 6ನೇ ಪ್ರತಿವಾದಿ ಪರ ಆದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ವಿರಾಜಪೇಟೆ.